ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಲಾಲ್‌ಬಾಗ್‌ನ ಸುತ್ತಲೂ ಸಣ್ಣಪುಟ್ಟ ವರ್ಕ ಶಾಪ್‌ಗಳು, ಸಣ್ಣಪುಟ್ಟ ಕಾರ್ಖಾನೆಗಳು ಈ ರೀತಿ ಬೆಳೆದು ಬರುತ್ತಿವೆ. ಲಾಲ್‌ಬಾಗ್‌ನ ಪರಿಸರದ ಮೇಲೆ ಮತ್ತು ಅದರ ಸೌಂದರ್ಯದ ಮೇಲೆ ಹೊಡೆತ ಬೀಳತಕ್ಕಂಥದ್ದು ಒಂದು. ಇನ್ನೊಂದು ಪರಿಸರದ ಮಾಲಿನ್ಯದ ಪ್ರಶ್ನೆ. ಲಾಲ್‌ಬಾಗ್‌ನ ಸುತ್ತಮುತ್ತಲೂ ಪೆಟ್ಟಿಗೆ ಅಂಗಡಿಗಳ, ವರ್ಕಶಾಪ್‌ಗಳ ಅತಿಕ್ರಮಣ ಆಗುತ್ತಿದೆ. ಕೆರೆಯನ್ನು ಏನಾದರೂ ಬೇರೆ ರೀತಿಯಲ್ಲಿ ಲಾಲ್‌ಬಾಗ್‌ಗೆ ಪೂರಕವಾಗಿ ಅಭಿವೃದ್ಧಿ ಪಡಿಸಲಿಕ್ಕೆ ಸಾಧ್ಯ ಇದೆಯೇ? ಮತ್ತು 30 ಲಕ್ಷ ರೂಪಾಯಿ ಖರ್ಚು ಏನು ಮಾಡುತ್ತೇವೆ ಎಂದು ಹೇಳಿದಿರಿ ಅದು ಯಾವುದಕ್ಕೂ ಸಾಕಾಗುವುದಿಲ್ಲ. ಆ ಹಣ ಬಹಳ ಕಡಿಮೆ ಇದೆ. ಅದನ್ನು ಹೆಚ್ಚು ಮಾಡಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಸಲಹೆ ಮಾಡುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ :- ಹಿಂದೆ ಇದ್ದಂಥ ಸಂದರ್ಭದಲ್ಲಿ ಅತಿಕ್ರಮಣ ಮಾಡುವುದಕ್ಕೆ ಅವಕಾಶ ಇತ್ತು. ಈಗ ಯಾವುದೇ ಕಾರಣಕ್ಕೂ ಕೂಡ ಅತಿಕ್ರಮಣ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಬಂದೋಬಸ್ತ್ ಆದಂಥ ಕಾಂಪೌಂಡ್‌ನ್ನು ಈಗಾಗಲೇ ನಿರ್ಮಿಸಲಾಗಿದೆ. ಮೊದಲು ಒಳಚರಂಡಿ ನೀರು ಈ ಕೆರೆಗೆ ಬರುತ್ತಿತ್ತು. ಆ ನೀರಿನಿಂದ ಕೆರೆಯಲ್ಲಿ ಮೀನುಗಳು ಸತ್ತುಹೋದವು. ಪರೀಕ್ಷೆ ಮಾಡಿಸಿದಾಗ ಇದೇ ನೀರಿನಿಂದ ಸತ್ತಿವೆ ಎಂದು ತಿಳಿಯಿತು. ಈಗ ಆ ನೀರನ್ನು ಬೇರೆ ಕಡೆಗೆ ವರ್ಗಾಯಿಸಲು ಬೆಂಗಳೂರು ಕಾರ್ಪೋರೇಷನ್ ರವರು ಒಪ್ಪಿಕೊಂಡಿದ್ದಾರೆ. ಮತ್ತು ಒಳಚರಂಡಿ ಮಂಡಳಿಯವರೂ ಸಹ ಆ ಕೆರೆಗೆ ಕಲುಷಿತ ನೀರು ಹೋಗಬಾರದು ಎನ್ನುವ ದೃಷ್ಟಿಯಿಂದ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಆ ಕಲುಷಿತ ನೀರನ್ನು ಕೂಡ ಈಗ ತಪ್ಪಿಸಿದ್ದೇವೆ. ಮತ್ತು ಹೂಳು ಎತ್ತುವ ಯೋಜನೆಯನ್ನು ಈಗಾಗಲೇ ಹಾಕಿಕೊಂಡಿದ್ದೇವೆ. ಆ ಪ್ರಕಾರ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಿಗೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ವಿಷಯ :- ರಾಜ್ಯದಲ್ಲಿ ಖಾಸಗೀ ಕೈಗಾರಿಕಾ ತರಬೇತಿ ಕೇಂದ್ರಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 400 (3020)

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) :- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಖಾಸಗೀ ಐ.ಟಿ.ಐ. ಸಂಸ್ಥೆಗಳಿವೆ ;

ಆ) ಈ ಸಂಸ್ಥೆಗಳಿಗೆ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆಯೇ ;

ಇ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಐ.ಟಿ.ಐ. ಸಂಸ್ಥೆಗಳನ್ನು ಈ ವರೆಗೂ ಪ್ರಾರಂಭಿಸಲಾಗಿದೆ ;

ಈ) ಶಿಗ್ಗಾಂವದಲ್ಲಿ ನೂತನವಾಗಿ ಐ.ಟಿ.ಐ. ಸಂಸ್ಥೆಯನ್ನು ಸರ್ಕಾರದವರು ಪ್ರಾರಂಭಿಸಲು ಯೋಜಿಸಿರುವರೆ ;

ಉ) ಇಲ್ಲವಾದಲ್ಲಿ ಹುಬ್ಬಳ್ಳಿಯಿಂದ ಸರಕಾರೀ ಐ.ಟಿ.ಐ. ಸಂಸ್ಥೆಯಿಂದ ಶಿಗ್ಗಾಂವಗೆ ಕೆಲವು ಟ್ರೇಡ್ ಶಿಫ್ಟ್ ಮಾಡಲಾಗುವುದೇ?

ಶ್ರೀ ಕಲ್ಲಪ್ಪ ನಾಗಪ್ಪ ಗದ್ದಿ :- ವೃತ್ತಿ ಶಿಕ್ಷಣದ ಬಗ್ಗೆ ಹೆಚ್ಚು ಮಹತ್ವವನ್ನು ಕೊಡುವ ಅವಶ್ಯಕತೆ ಇದೆ. ಶಿಗ್ಗಾಂ ಮತ್ತು ನವಲಗುಂದ ಅಂತಹ ತಾಲ್ಲೂಕು ಮಟ್ಟದಲ್ಲಿ ಸರ್ಕಾರದ ವತಿಯಿಂದ ಐ.ಟಿ.ಐ. ಕಾಲೇಜುಗಳನ್ನು ತೆರೆಯಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಗುರುನಾಥ್ :- ಈಗ ಸಧ್ಯದಲ್ಲಿ ಅಲ್ಲಿರತಕ್ಕಂತಹ ವಿದ್ಯಾರ್ಥಿಗಳಿಗೆ ತೊಂದರೆಯಾದರೆ, ಅದರ ಸಮೀಪ ಇರತಕ್ಕಂತಹ ಐ.ಟಿ.ಐ.ನಲ್ಲಿ ಪ್ರವೇಶಕ್ಕೆ ಅನುಕೂಲ ಮಾಡಿ ಕೊಡಬಹುದು.

ವಿಷಯ :- ರಾಜ್ಯದಲ್ಲಿ ಆಗರಬತ್ತಿ ಕಾರ್ಮಿಕರ ಸಮಸ್ಯೆಗಳು

ಚುಕ್ಕೆ ರಹಿತ ಪ್ರಶ್ನೆ 403 (2953)

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಆಗರಬತ್ತಿ ಉದ್ಯಮದಲ್ಲಿ ದುಡಿಯುತ್ತಿರುವ ಪುರುಷ : ಮಹಿಳಾ ಕಾರ್ಮಿಕರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ಒದಗಿಸುವುದು).

ಆ) ರಾಜ್ಯದಲ್ಲಿ ಆಗರಬತ್ತಿ ತಯಾರಿಕೆಯಲ್ಲಿ ನೊಂದಾಯಿತ ಮತ್ತು ನೊಂದಾವಣೆ ಇಲ್ಲದ ಕಂಪನಿಗಳು ಎಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)?

ಇ) ಈ ಉದ್ಯಮದಲ್ಲಿ ಮನೆಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ದಾಖಲೆ ಗಳಿವೆಯೇ?

ಈ) ಆಗರಬತ್ತಿ ಉದ್ಯಮದಲ್ಲಿ ಮನೆಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರಿಗೆ ವೈದ್ಯಕೀಯ, ಕಾರ್ಮಿಕ ಭವಿಷ್ಯ ನಿಧಿ, ಬೋನಸ್ ಕಾಯ್ದೆಗಳು ಜಾರಿಯಲ್ಲಿವೆಯೇ ;

ಉ) ಜಾರಿಯಲ್ಲಿಲ್ಲದ ಪಕ್ಷದಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :-

ಅ) ಜಿಲ್ಲೆಯ ಹೆಸರು	ಮಹಿಳೆಯರು	ಪುರುಷರು
1. ಬೆಂಗಳೂರು	2,377	638
2. ಮೈಸೂರು	516	50
3. ಕೋಲಾರ	20	30
ಒಟ್ಟು	2,913	718

ಆ) ನೊಂದಾಯಿತ ಕಂಪನಿಗಳು.

1. ಬೆಂಗಳೂರು ಜಿಲ್ಲೆಯಲ್ಲಿ :55
2. ಮೈಸೂರು ಜಿಲ್ಲೆಯಲ್ಲಿ : 11
3. ಕೋಲಾರ ಜಿಲ್ಲೆಯಲ್ಲಿ : 01

ಒಟ್ಟು : 67

ನೊಂದಾವಣೆ ಇಲ್ಲದ ಕಂಪನಿಗಳ ಮಾಹಿತಿ ಲಭ್ಯವಿರುವುದಿಲ್ಲ.